ಸರ್ಕಾರ ಉತ್ತರ ಒದಗಿಸುವುದಕ್ಕೆ ಮೊದಲು ಈ ಪ್ರಶ್ನೆ ಕೇಳಿದ್ದನ್ನು ಪ್ರಶ್ನೆ ಮಾಡುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿ ಹಾಗಾಗಿ ನಾನು ಒಬ್ಬ ಶಾಸಕನಾಗಿ ಕೆಲಸ ಮಾಡುವುದಕ್ಕೆ ಅಡಚಣೆಯಾಗಿದೆ. ನನ್ನ ಹಕ್ಕುಚ್ಯುತಿ ಆಗಿದೆ. ದಯವಿಟ್ಟು ಇದನ್ನು ಮುಂಡಿಸುವುದಕ್ಕೆ ನನಗೆ ಅವಕಾಶ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಅವಕಾಶವನ್ನು ನಾಳೆ ಮಾಡಿ ಕೊಡುತ್ತೇನೆ.

ವಿಷಯ: ತಮಿಳುನಾಡಿನವರು ಕರ್ನಾಟಕದ ಭೂ ಪ್ರದೇಶವನ್ನು ಆಕ್ರಮಿಸಿ ಕೊಂಡಿರುವ ಬಗ್ಗೆ

†ಶ್ರೀ ಹೆಚ್.ಎಸ್ ಮಹದೇವ ಪ್ರಸಾದ್ : ಮಾನ್ಯ ಉಪಾಧ್ಯಕ್ಷರೆ, ಕಳೆದ ಮೂರು ತಿಂಗಳ ಹಿಂದೆ ಚಾಮರಾಜನಗರ ತಾಲ್ಲೂಕಿಗೆ ಸೇರಿದ ಕೋಳಿಪಾಳ್ಯದ ಬಳಿ ಕರ್ನಾಟಕ ಪುನಜೂರು ಗ್ರಾಮ ಪಂಚಾಯಿತಿಗೆ ಸೇರಿದ ವ್ಯಾಪ್ತಿಯಲ್ಲಿ ಏನು ತಾಳವಾಡಿಗೆ ಹೋಗುವ ರಸ್ತೆ ಇದೆ, ಆ ಗಡಿ ಭಾಗ ಕುಂಬಾರ ಗುಂಡಿ ಎನ್ನುವ ಪ್ರದೇಶ ಇದುವರೆಗೆ ಕರ್ನಾಟಕ ಹಾಗೂ ತಮಿಳುನಾಡು ಗಡಿ ಪ್ರದೇಶವಾಗಿ ಇದನ್ನು ಮಾಡಿದ್ದರು. ಆದರೆ ಇತ್ತೀಚೆಗೆ ಮೂರು–ನಾಲ್ಕು ತಿಂಗಳ ಹಿಂದೆ ತಮಿಳುನಾಡಿನವರು ಸುಮಾರು ಒಂದು ಕಿಲೋ ಮೀಟರ್‌ನಷ್ಟು ಕರ್ನಾಟಕ ಪ್ರದೇಶಕ್ಕೆ ಬಂದು ತಮ್ಮ ಗಡಿಯ ಅಂಚು ಎಂದು ಬೋರ್ಡ್ ನೇತು ಹಾಕಿ ತಮ್ಮ ವ್ಯಾಪ್ತಿಗೆ ಸುಮಾರು 1800 ಎಕರೆ ಅಷ್ಟು ಭೂ ಪ್ರದೇಶವನ್ನು ತಮ್ಮ ವಶಕ್ಕೆ ತೆಗೆದುಕೊಂಡು ತಮ್ಮ ವ್ಯಾಪ್ತಿಗೆ ವಿಸ್ತರಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಅನೇಕ ಕನ್ನಡ ಸಂಘಟನೆಗಳು ಚಳುವಳಿಗಾರರು ಎಲ್ಲಾ ಹೋಗಿ ಆ ಪ್ರದೇಶ ಏನು ಇತ್ತು ಹಿಂದೆ 1935 ರಲ್ಲಿ ಒಂದು ಮ್ಯಾಪ್ ಇದೆ, ಅದರ ಪ್ರಕಾರ ಗಡಿ ಪ್ರದೇಶ ಏನು ಎನ್ನುವುದು ನಿಗದಿಪಡಿಸಿದ್ದಾರೆ. ಆದರೂ ಕೂಡ ತಮಿಳುನಾಡಿನವರು ಆ ಒಂದು ಪ್ರದೇಶವನ್ನು ವಿಸ್ತರಿಸಿಕೊಂಡಿದ್ದಾರೆ. ಅದೇ ರೀತಿ ಕೊಳ್ಳೇಗಾಲ ಹತ್ತಿರ ಕೂಡ ತಮಿಳುನಾಡಿನವರು ವಿಸ್ತರಿಸಿಕೊಳ್ಳುತ್ತಿದ್ದಾರೆ. ಹೀಗೆ ಬೇರೆ ಬೇರೆ ಕಡೆ ವಿಸ್ತರಣೆ ಮಾಡಿಕೊಂಡು ಹೋಗುತ್ತಿದ್ದಾರೆ. ಇದು ಒಂದು ಕಿಲೋ ಮೀಟರ್ ವಿಸ್ತರಿಸಿ ಕೊಂಡಿದ್ದಾರೆ. ಸಾರ್ವಜನಿಕರಿಗೆ ಹಾಗೂ ಜಿಲ್ಲಾ ಆಡಳಿತಕ್ಕೆ ಗೊತ್ತಿದೆ. ಆದರೂ ಕೂಡ ಸುಮಾರು 8–10 ಜನ ರೈತರಿಗೆ ಹಿಂದೆ ಸಾಗುವಳಿ ಚೀಟಿ ಕೊಟ್ಟು ಅವರು ವ್ಯವಸಾಯ ಕೂಡ ಮಾಡುತ್ತಿದ್ದಾರೆ. ನಮ್ಮ ಜಿಲ್ಲಾ ಪರಿಷತ್ತು ವತಿಯಿಂದ ಕಿರು ನೀರು ಯೋಜನೆ ಮುಂತಾದ ಗಿರಿಜನರಿಗೆ ಬೇಕಾದ ಸೌಲಭ್ಯಗಳನ್ನು ಆ ಪ್ರದೇಶದಲ್ಲಿ ಒದಗಿಸಿದೆ. ಆದರೆ ಬೌಂಡರಿ ಮಾತ್ರ ತಮಿಳುನಾಡಿನವರ ವಶದಲ್ಲಿ ಇದೆ. ಹಾಗಾಗಿ ನಾವು ಅಲ್ಲಿ ಜನ ನಮ್ಮ ಬೌಂಡರಿ ಅತಿಕ್ರಮಿಸಿದ್ದಾರೆ. ಇದನ್ನು ಬಿಡುಗಡೆ ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಮತ್ತು ಅರಣ್ಯ ಇಲಾಖೆಯವರಿಗೆ ದೂರು ಕೊಡುತ್ತಿದ್ದರೂ ಇದುವರೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಮೊನ್ನೆ ಮೊನ್ನೆ ಕಂದಾಯ ಕಾರ್ಯದರ್ಶಿಗಳೂ ಕೂಡ ಒಂದು ಸಭೆ ಮಾಡುತ್ತೇವೆಂದು ಬಂದು ಮುಖ್ಯ ಮಂತ್ರಿಗಳು ಹೆಗ್ಗಡದೇವನಕೋಟೆಗೆ ಬರುವ ಕಾರ್ಯಕ್ರಮ ಇದೆ, ಆದ್ದರಿಂದ ಇವತ್ತು ಮೀಟಿಂಗ್ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ ಮೀಟಿಂಗ್ ಮುಂದಕ್ಕೆ ಹಾಕಿದರು. ಹೀಗಾಗಿ ಸುಮಾರು ಭೂಪ್ರದೇಶ ನಮ್ಮ ರಾಜ್ಯದ ಜಮೀನು ಒತ್ತುವರಿ ಮಾಡಿಕೊಂಡಿದ್ದರೂ ಸರ್ಕಾರ ಇದರ ಬಗ್ಗೆ ಒಂದು ನಿರ್ಲಕ್ಷ್ಯ ಭಾವನೆ ತೋರಿಸುತ್ತಿದೆ. ಸರ್ವೇ ಮಾಡಿಸಬೇಕೆಂದು ಕರ್ನಾಟಕದವರು

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ತಮಿಳುನಾಡಿನವರಿಗೆ ಪತ್ರ ಬರೆದು ಅದಕ್ಕೆ ಒಂದು ಡೇಟ್ ನಿಗದಿಪಡಿಸಿದ ದಿನ ಕರ್ನಾಟಕದ ಪರವಾಗಿ ಯಾರೂ ಹೋಗಿ ಅಲ್ಲಿ ಭಾಗವಹಿಸಲಿಲ್ಲ. ಬೆಳಗಿನಿಂದ ಸಾಯಂಕಾಲದವರೆಗೆ ತಮಿಳುನಾಡಿನ ಅಧಿಕಾರಿಗಳು ಬಂದು ಕಾದು ವಾಪಸ್ ಹೋಗಿದ್ದಾರೆ. ಈ ರೀತಿ ನಮ್ಮ ಗಡಿ ಪ್ರದೇಶ ಒತ್ತುವರಿ ಒಂದು ಕಡೆ ನಡೆಯುತ್ತಿದೆ. ಅದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ, ಕೂಡಲೇ ಇದರ ಬಗ್ಗೆ ಗಮನ ಹರಿಸಿ ಕರ್ನಾಟಕದ ಮ್ಯಾಪ್ ಏನಿದೆ ಅದರ ಪ್ರಕಾರ ನಮ್ಮ ರಾಜ್ಯದ ನೆಲ, ನಮ್ಮ ರಾಜ್ಯದಲ್ಲಿ ಉಳಿಯುವ ವ್ಯವಸ್ಥೆ ಆಗಬೇಕೆಂದು ಹೇಳಿ ಈ ರಾಜ್ಯದ ಜನ ಅಲ್ಲಿ ಹೋಗಿ ಸಾಗುವಳಿ ಮಾಡುತ್ತಿದ್ದರೆ ನೀವೆಲ್ಲಾ ಜಮೀನು ಬಿಟ್ಟು ಹೊರಗಡೆ ಹೋಗಿ ಎಂದು ಒಕ್ಕಲಿಬ್ಬಿಸುತ್ತಿದ್ದಾರೆ. ತಮಿಳುನಾಡಿಗೆ ಸೇರಿಕೊಂಡಿದೆ ಎನ್ನುವ ಭಾವನೆಯಿಂದ ನಮ್ಮವರು ಯಾರೂ ಅದರ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸಿ ಜಿಲ್ಲಾ ಆಡಳಿತವಾಗಲಿ, ಅರಣ್ಯ ಇಲಾಖೆಯಾಗಲಿ ಅದನ್ನು ತಮ್ಮ ವಾಸ್ತವದ ಚಿತ್ರ ಏನಿದೆ ಅದನ್ನು ತಿಳಿಯುವ ಪ್ರಯತ್ನ ಮಾಡಲಿಲ್ಲ. ಮೂರು ನಾಲ್ಕು ತಿಂಗಳುಗಳಿಂದ ನಮ್ಮಲ್ಲಿ ಇದೊಂದು ಸ್ಥಳೀಯ ಸಮಸ್ಯೆಯಾಗಿದೆ. ಇದನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ತಂದು ಕೂಡಲೇ ನಮ್ಮ ಗಡಿ ಪ್ರದೇಶ ಏನಿದೆ ಅದು ನಮ್ಮ ಕರ್ನಾಟಕದ ಭಾಗ ಅದನ್ನು ಕರ್ನಾಟಕದಲ್ಲಿಯೇ ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಕೆಂದು ನಾನು ತಮ್ಮ ಗಮನ ಸೆಳೆಯುತ್ತೇನೆ.

†ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇದು ಬಹಳ ಮುಖ್ಯವಾದ ವಿಷಯ. ಪುಣಜೂರಿನಲ್ಲಿ ವೀರಪ್ಪನ್ ಹಾಡು ಹಗಲಿನಲ್ಲಿ ಬಂದು 9 ಜನರಿಗೆ ಕೊಂದು ಹೊರಟು ಹೋಗಿದ್ದ. ಒಂದು ರೀತಿ ವೀರಪ್ಪನ್ ಸಾಮ್ರಾಜ್ಯ ಎನ್ನುವ ಮಟ್ಟದಲ್ಲಿ ಪುಣಜೂರು ಇದೆ. ನಾನೂ ಮತ್ತು ಅವತ್ತಿನ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಅಲ್ಲಿ ಭೇಟಿ ಕೊಟ್ಟಿದ್ದೆವು. ಇದು ಬಹಳ ಮಹತ್ವದ ವಿಚಾರ. ಮಾನ್ಯ ಕೃಷ್ಣಮೂರ್ತಿಯವರು ಆ ಸಂದರ್ಭದಲ್ಲಿ ಶಾಸಕರಾಗಿದ್ದರು. ನನ್ನ ಜೊತೆಯಲ್ಲಿ ಅವರೂ ಬಂದಿದ್ದರು. ದಟ್ಟವಾದ ಅರಣ್ಯ ಪ್ರದೇಶ ಅರಣ್ಯ ಭೂಮಿ ಎನ್ನುವ ನೆಪದಲ್ಲಿ ತಮಿಳುನಾಡಿನವರು ಬಂದು ಸುಮಾರು ಒಂದು ಕಿಲೋ ಮೀಟರ್‌ನಷ್ಟು ಗಡಿಯನ್ನು ವಿಸ್ತರಣೆ ಮಾಡಿಕೊಂಡಿದ್ದಾರೆ. ಕನ್ನಡ ಪರವಾಗಿರುವ ಸಂಘಟನೆಗಳು ಅದಕ್ಕೋಸ್ಕರ ಚಳುವಳಿ ಮಾಡುತ್ತಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿದೆಯಾ? ಮುಖ್ಯ ಕಾರ್ಯದರ್ಶಿಗಳು ತಮಿಳುನಾಡಿನ ಕಾರ್ಯದರ್ಶಿಗಳಿಗೆ ಪತ್ರ ಬರೆದು ಗಡಿಯನ್ನು ಅವರು ಏನು ಕ್ರಾಸ್ ಮಾಡಿದ್ದಾರೆ ಇದನ್ನು ನಿಲ್ಲಿಸತಕ್ಕಂಥದ್ದಕ್ಕೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಇದನ್ನು ನಾವು ಈ ಸಂದರ್ಭದಲ್ಲಿ ಸುಮ್ಮನೆ ಬಿಟ್ಟರೆ ಇದು ಸದನಕ್ಕೆ ಬೇರೆ ರೀತಿಯಲ್ಲಿ ರೆಕಾರ್ಡ್ ಆಗುತ್ತದೆ. ಅದಕ್ಕೆ ತಾವು ಪ್ರತಿಕ್ರಿಯೆಯನ್ನು ವ್ಯಕ್ತಮಾಡಬೇಕೆಂದು ಈ ಸಭೆಯಲ್ಲಿ ಒತ್ತಾಯ ಮಾಡುತ್ತೇವೆ. ಒಬ್ಬ ಮುಖ್ಯ ಮಂತ್ರಿಯಾಗಿ ನೀವು ರೀಆ್ಯಕ್ಟ್ ಮಾಡದೆ ಹೋದರೆ ತಮಿಳುನಾಡಿನವರು ಏನೆಂದು ಕೊಳ್ಳುತ್ತಾರೆ? ಈ ವಿಚಾರದಲ್ಲಿ ಸರ್ಕಾರದ ನಿಲುವು ಏನು? ಅವರು ಗಂಭೀರವಾದ ಆರೋಪ ಮಾಡಿದ್ದಾರೆ. ಇದರ ಬಗ್ಗೆ ತಮ್ಮ ಪ್ರತಿಕ್ರಿಯೆಯನ್ನು ನಾವು ಬಯಸುತ್ತೇವೆ.

ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್ : ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂತೆ ಗಡಿ ಪ್ರದೇಶದ ಮ್ಯಾಪ್ ಏನಿದೆ ಅದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಈಗ ತಾನೇ ತಾವು ಈ ಬಗ್ಗೆ ಹೇಳಿದ್ದೀರಿ. ಈಗಲೇ ಅದರ ಬಗ್ಗೆ ಹೇಳಬೇಕು ಎಂದರೆ, ಅದರಲ್ಲೂ ಅದರ ಬಗ್ಗೆ ಮುಖ್ಯಮಂತ್ರಿಗಳೇ ರಿಯಾಕ್ಟ್ ಮಾಡಬೇಕು ಎಂದರೆ ಕಷ್ಟವಾಗುತ್ತದೆ. ನಾಳೆ ಅದಕ್ಕೆ ಬೇಕಾದಂಥ ಮಾಹಿತಿ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಗೊಂದಲ

ಶ್ರೀ ಎ.ಆರ್. ಕೃಷ್ಣಮೂರ್ತಿ : ಮಾನ್ಯ ಉಪಾಧ್ಯಕ್ಷರೆ, ಚಾಮರಾಜನಗರದಂತೆ ಕೊಳ್ಳೇಗಾಲ ತಾಲ್ಲೂಕಿನಲ್ಲಿಯೂ ಈ ರೀತಿಯ ಗಡಿ ಸಮಸ್ಯೆಗಳು ಉಲ್ಬಣಗೊಂಡಿವೆ.

ಉಪಾಧ್ಯಕ್ಷರು : ಕೃಷ್ಣಮೂರ್ತಿಯವರೆ, ಒಬ್ಬರು ಮಾತನಾಡಿದ್ದಾರೆ. ಮತ್ತೆ ಅದೇ ವಿಷಯ ಹೇಳಿದರೆ ಹೇಗೆ?

ಶ್ರೀ ಎ.ಆರ್. ಕೃಷ್ಣಮೂರ್ತಿ : ಅದೇ ತಾಲ್ಲೂಕಿಗೆ ಸಂಬಂಧಪಟ್ಟಿರುವ ವಿಚಾರವಾದ್ದರಿಂದ ಮಾತನಾಡುತ್ತಿದ್ದೇನೆ.

ಉಪಾಧ್ಯಕ್ಷರು : ಈಗ ಅದೇ ವಿಷಯವನ್ನು ಮಾನ್ಯ ಮಹದೇವ ಪ್ರಸಾದ್‌ರವರು ಪ್ರಸ್ತಾಪ ಮಾಡಿದ್ದಾರೆ. ನಾಳೆ ಸರ್ಕಾರ ಉತ್ತರ ಕೊಡುತ್ತದೆ ಎಂದು ಹೇಳಿದ್ದಾರೆ.

ಶ್ರೀ ಎ.ಆರ್. ಕೃಷ್ಣಮೂರ್ತಿ : ಉತ್ತರ ಕೊಡುವುದಕ್ಕಿಂತ ಮುಂಚೆ ಕೆಲವೊಂದು ವಿಚಾರಗಳನ್ನು ಹೇಳಬೇಕಾಗಿತ್ತು.

ಉಪಾಧ್ಯಕ್ಷರು : ಪ್ರಸ್ತಾವನೆ ಮಾಡಿದ್ದಾರಲ್ಲಾ. ಉತ್ತರ ನೀವು ನಾಳೆ ಕೇಳಿ. ನೀವೂ ಕೂಡ ಈಗ ಪ್ರಸ್ತಾವನೆ ಮಾಡಿದ್ದೀರಿ. ಉತ್ತರ ನೀವು ನಾಳೆ ಕೇಳಿ.

ಶ್ರೀ ಎ.ಆರ್. ಕೃಷ್ಣಮೂರ್ತಿ : ಮಾನ್ಯ ಮಹದೇವಪ್ರಸಾದ್‌ರವರು ಮಾಡಿದ್ದಾರೆ. ಆದರೂ ನಾನು ಕೆಲವು ವಿಚಾರಗಳನ್ನು ಹೇಳಲು ಅವಕಾಶ ಕೊಡಿ.

ಉಪಾಧ್ಯಕ್ಷರು : ಎಲ್ಲರೂ ಅದೇ ವಿಚಾರವನ್ನು ಹೇಳಿದರೆ ಹೇಗೆ? ಈಗ ಪ್ರಸ್ತಾಪ ಮಾಡಿದ್ದೀರಿ. ಉತ್ತರ ನೀವು ನಾಳೆ ಕೇಳಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೆ, ಕೆಲವೊಂದು ಸೂಕ್ಷ್ಮವಾದ ವಿಚಾರಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ, ಪತ್ರಿಕೆಗಳಲ್ಲಿ ಬಂದಿರುತ್ತದೆ, ಇಲಾಖಾ ವರದಿಗಳು ಬಂದಿರುತ್ತವೆ, ಇಂಟಲಿಜೆನ್ಸ್ ರಿಪೋರ್ಟ್‌ಗಳು ಬಂದಿರುತ್ತವೆ. ಆದ್ದರಿಂದ ಈ ಬಗ್ಗೆ ತಕ್ಷಣದಲ್ಲಿ ಉತ್ತರ ಕೊಡುವುದಕ್ಕೆ ಅವಕಾಶ ಇದೆ. ಅದನ್ನು ಮುಂದೂಡುವುದು ಅಷ್ಟೊಂದು ಸಮಂಜಸವಾಗುವುದಿಲ್ಲ. ಇದಲ್ಲದೆ ನಾನು ಒಂದೆರಡು ಪ್ರಮುಖವಾದ ವಿಚಾರಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಉಪಾಧ್ಯಕ್ಷರು : ಈಗ ವಿಷಯ ಗೊತ್ತಾಗಿದೆ. ಅದಕ್ಕೆ ಈಗಲೇ ಉತ್ತರ ಕೊಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ?

ಶ್ರೀ ಎ.ಆರ್. ಕೃಷ್ಣಮೂರ್ತಿ : ಮಾನ್ಯ ಉಪಾಧ್ಯಕ್ಷರೆ, ಐದು ನಿಮಿಷ ಮಾತನಾಡುತ್ತೇನೆ, ವಿತ್ ಯುವರ್ ಪರ್ಮಿಶನ್.

ಶ್ರೀ ಡಿ.ಬಿ. ಚಂದ್ರೇಗೌಡ : ಯಾವ ವಿಚಾರದ ಬಗ್ಗೆ?

ಶ್ರೀ ಎ.ಆರ್. ಕೃಷ್ಣಮೂರ್ತಿ : ಅದೇ ಅಂತರರಾಜ್ಯ ಗಡಿ ಡಿಸ್‌ಪ್ಯೂಟ್ ಬಗ್ಗೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷರೆ, ಯಾವುದಕ್ಕಾದರೂ ಒಂದು ಕ್ರಮ ಎಂದು ಇದೆ. ಅವರು ಶೂನ್ಯ ವೇಳೆಯಲ್ಲಿ ವಿಚಾರವನ್ನು ಎತ್ತಿದ್ದಾರೆ. ಅದರ ಮೇಲೆ ಚರ್ಚೆಯೇ ಆದರೆ ಹೇಗೆ? ಮಾನ್ಯ ಮಹದೇವ್ ಪ್ರಸಾದ್ ಕೊಟ್ಟಿರುವ ನೋಟಿಸ್‌ಗೆ ಇವರ ಸಹಿಯೂ ಕೂಡ ಇಲ್ಲ. ಸುಮ್ಮನೆ ಯಾರೋ ಒಬ್ಬರು ವಿಚಾರ ಎತ್ತಿದ ತಕ್ಷಣ ಒಂದ್ನಿಮಿಷ ಇದಕ್ಕೆಲ್ಲ ಉತ್ತರಿಸಲು ಸಾಧ್ಯವೇ ಒಂದು ಕ್ರಮ ಬೇಡವೆ?

ಗೊಂದಲ

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಯಾರೋ ಒಬ್ಬರು ಎಂದರೆ ಹೇಗೆ? ಅವರೂ ಈ ಸದನದ ಸದಸ್ಯರು ಸ್ವಾಮಿ.

ಶ್ರೀ ಡಿ.ಬಿ. ಚಂದ್ರೇಗೌಡ : ಇಲ್ಲ ಎಂದು ನಾನು ಹೇಳುತ್ತಿಲ್ಲ. ವಿಚಾರ ಎತ್ತುವುದಕ್ಕೂ ಕ್ರಮ ಬೇಡವೇ ಎಂದು ನಾನು ಕೇಳುತ್ತಿರುವುದು.

ಶ್ರೀ ಬಿ. ಸೋಮಶೇಖರ್ : ಶೂನ್ಯ ವೇಳೆಯಲ್ಲಿ ಮೆನ್‌ಶನ್ ಮಾಡತಕ್ಕಂಥ ಅವಕಾಶ ಇದೆ. ಉತ್ತರ ಬೇಕಾದರೆ ನಾಳೆ ಕೊಡಲಿ.

ಶ್ರೀ ಡಿ.ಬಿ. ಚಂದ್ರೇಗೌಡ : 'ಮೆನ್‌ಶನ್ ಮಾಡುವುದಕ್ಕೂ ಮೊದಲೇ ನೋಟೀಸ್ ಕೊಟ್ಟಿರಬೇಕು. ಆದರೆ ಅವರು ಮೊದಲೇ ನೋಟೀಸ್ ಕೊಟ್ಟಿಲ್ಲ.

1.00 ಪಿಎಂ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಹದೇವ್ ಪ್ರಸಾದ್‌ರವರು ಎತ್ತಿರುವ ವಿಚಾರ ಬಹಳ ಪ್ರಮುಖವಾದ ವಿಚಾರವಾಗಿದೆ.

ಉಪಾಧ್ಯಕ್ಷರು : ಮಾನ್ಯ ಮಹದೇವ ಪ್ರಸಾದ್‌ರವರು ಎತ್ತಿರುವ ವಿಚಾರ ಪ್ರಮುಖವಾದ ವಿಚಾರವಾದ್ದರಿಂದಲೇ ಪ್ರಸ್ತಾಪ ಮಾಡಲು ಅವಕಾಶ ನೀಡಿದೆ. ಈಗ ಅವರು ಪ್ರಸ್ತಾಪ ಮಾಡಿದ್ದಂತೂ ಆಗಿದೆ. ನಾಳೆ ಅದಕ್ಕೆ ಉತ್ತರ ಕೊಡುತ್ತಾರೆ. ನೀವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಉಪಾಧ್ಯಕ್ಷರೆ, ಒತ್ತುವರಿಯಾದ ವಿಷಯ 2000ದ ಇಸವಿಯಲ್ಲಿಯೇ ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಜಂಟಿ ಸಮೀಕ್ಷೆಗೆ ತಮಿಳುನಾಡು ಸರ್ಕಾರದ ಅಧಿಕಾರಿಗಳು ಬಂದಂಥ ಸಂದರ್ಭದಲ್ಲಿ ನಮ್ಮ ರಾಜ್ಯದ ಅಧಿಕಾರಿಗಳು ಹೋಗದೇ ಇರುವಂಥದ್ದು ನಿಲಕ್ಷ್ಯತನ ತೋರಿದೆ. ಈ ರೀತಿಯ ನಿರ್ಲಕ್ಷ್ಯದಿಂದಾಗಿ 2000 ಇಸವಿ ಆದಮೇಲೆ ಅವರು ಇನ್ನೂ ಗಡಿ ದಾಟಿ ಮುಂದೆ ಬಂದಿದ್ದಾರೆ.

ಉಪಾಧ್ಯಕ್ಷರು : ನೀವು ಈ ವಿಷಯದ ಬಗ್ಗೆ ಮಾತನಾಡಲು ನನಗೆ ಅರ್ಜಿ ಕೊಟ್ಟಿಲ್ಲ. ತಾವು ಪ್ರಸ್ತಾವನೆ ಸಹ ಕಳುಹಿಸಿಲ್ಲ. ಆದರೂ ಹಾಕಿದ್ದೇವೆ. ನಾಳೆ ಮಾತನಾಡಿ ತಾವು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾನು ಈ ಬಗ್ಗೆ ಪ್ರಶ್ನೆ ಹಾಕಿದ್ದೆ. ಆದರೆ ಅನ್‌ಸ್ಟಾರ್ಡ್ ಆಗಿ ಉತ್ತರ ಬಂದಿದೆ. ಅನ್‌ಸ್ಟಾರ್ಡ್ ಆಗಿ ಉತ್ತರ ಬಂದಿರುವುದು ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ಅದರ ಆಧಾರದ ಮೇಲೆಯೇ ಮಾನ್ಯ ಮಹದೇವ ಪ್ರಸಾದ್‌ರವರು ಕೇಳಿದ್ದಾರೆ. ನನ್ನ ಪ್ರಶ್ನೆ ಇರುವುದು, ಮಾನ್ಯ ಮಹದೇವ ಪ್ರಸಾದ್‌ರವರು ಹಾಗೂ ಉಳಿದ ಆ ಭಾಗದ ಸದಸ್ಯರುಗಳು ಕೇಳಿರುವ ವಿಚಾರಗಳ ಜೊತೆಗೆ ಸರ್ಕಾರಕ್ಕೆ ನನ್ನ ವಿನಂತಿ ಹಾಗೂ ನನ್ನ ಆಗ್ರಹ ಏನೆಂದರೆ, ಈಗಾಗಲೇ ಕರ್ನಾಟಕ ರಾಜ್ಯ ಎಂದು ಹೇಳಿ ಪ್ರತ್ಯೇಕವಾಗಿಯೆ ಐದು ದಶಕಗಳ ಕಾಲವಾಯಿತು. ಆದರೆ ನಮ್ಮ ಗಡಿಯನ್ನು ಗುರುತಿಸಿಕೊಳ್ಳುವುದಕ್ಕೆ ನಮ್ಮ ಕೈಯಲ್ಲಿ ಇನ್ನೂ ಆಗಿಲ್ಲ. ನಾವು ಎಷ್ಟು ಕಾತುರರಾಗಿದ್ದೇವೆ ನಮ್ಮ ರಾಜ್ಯದ ಹಿತವನ್ನು ಕಾಪಾಡುವುದಕ್ಕೆ, ಗಡಿಯನ್ನು ರಕ್ಷಣೆಯನ್ನು ಮಾಡಿಕೊಳ್ಳುವುದಕ್ಕೆ ಎಂಬುದು ಬಹಳ ಮುಖ್ಯ ಇದೆ.

ಉಪಾಧ್ಯಕ್ಷರು : ತಾವು ಮೊದಲೇ ನೋಟೀಸ್ ಕಳುಹಿಸದೇ ಇರುವುದರಿಂದ ಈ ವಿಷಯದ ಬಗ್ಗೆ ಈಗ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. ಈಗ ಪ್ರಸ್ತಾವನೆ ಆಗಿದೆ. ಮತ್ತೇಕೆ ಅದರ ಬಗ್ಗೆ ಹೇಳುತ್ತೀರಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಬೇರೆ ಬೇರೆ ಪ್ರದೇಶಗಳಲ್ಲಿ ಆಗಿದೆ. ಅದರ ಬಗ್ಗೆ ಹೇಳುತ್ತೇನೆ. ನಮ್ಮ ರಾಜ್ಯದ ಹಿತ ಕಾಪಾಡುವುದಕ್ಕೆ ಯಾರ ಜೊತೆ ಬೇಕಾದರೂ ನಾವು ವ್ಯಾಜ್ಯ ಮಾಡೋಣ. ನಮ್ಮ ರಾಜ್ಯದ ಹಿತವನ್ನು ನಾವೆಲ್ಲರೂ ಕೂಡಿಯೇ ಕಾಪಾಡೋಣ.

ಉಪಾಧ್ಯಕ್ಷರು : ಅದಕ್ಕೆ ಯಾರದ್ದೂ ಭಿನ್ನಾಭಿಪ್ರಾಯವಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸರ್ಕಾರದ ಗಮನಕ್ಕೆ 2000 ಇಸವಿಯಲ್ಲಿಯೇ ಬಂದಿದ್ದರೂ ಕೂಡ ಇದುವರೆಗೆ ಕ್ರಮ ತೆಗೆದುಕೊಂಡಿಲ್ಲ. ಈ ರೀತಿ ನಿರ್ಲಕ್ಷ್ಯ ಆಗಬಾರದು. ಆದ್ದರಿಂದ ಮೊದಲು ಎರಡೂ ಸರ್ಕಾರದ ಕಡೆಯಿಂದ ಸರ್ವೆ ಮಾಡಿಸಿ ನಮ್ಮ ರಾಜ್ಯದ ಗಡಿಯನ್ನು ಗುರುತಿಸಿಕೊಳ್ಳುವ ಕೆಲಸವಾಗಬೇಕು.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಜಯಲಲಿತಾ ಜೊತೆ ಹೋದರೆ ಅಡ್ಡಿಯಿಲ್ಲ, ವೀರಪ್ಪನ್ ಜೊತೆ ಹೋಗ್ತಾ ಇದ್ದಾರಲ್ಲಾ, ಇದು ಅವಸ್ಥೆ. ವೀರಪ್ಪನ್ ಜೊತೆ ಸಖ್ಯ ಮಾಡುವುದಕ್ಕಿಂತ ಜಯಲಲಿತ ಜೊತೆ ಇರುವುದು ಒಳ್ಳೆಯದು.

ಶ್ರೀ ಸಿ ಗುರುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಸರ್ಕಾರಕ್ಕೆ ನನ್ನದೊಂದು ಸಲಹೆ ಇದೆ. ಈ ಸಮಸ್ಯೆ ಎಲ್ಲಾ ತಾನಾಗಿ ತಾನೇ ಹೊರಟುಹೋಗುತ್ತದೆ. ಆ ವೀರಪ್ಪನ್‌ನ್ನು ಮೊದಲು ಹಿಡಿದುಬಿಟ್ಟರೆ ಎಲ್ಲವೂ ಸರಿಹೋಗುತ್ತದೆ. ಆ ದಿಕ್ಕಿನಲ್ಲಿ ಮನಸ್ಸು ಮಾಡಿ.

ವಿಷಯ : ನೆಟ್‌ವರ್ಕ್ ಲಾಟರಿ ನಿಯಮಾವಳಿಗಳನ್ನು ಮಂಡಿಸುವ ಬಗ್ಗೆ

†**ಶ್ರೀ ಬಿ. ಸೋಮಶೇಖರ್** : ಮಾನ್ಯ ಉಪಾಧ್ಯಕ್ಷರೆ, ಸಭೆಯ ಮುಂದಿಡಲಾಗುವ ಪಟ್ಟಿಯನ್ನು ಇಲ್ಲಿ ಇಟ್ಟಿದ್ದಾರೆ. 15ನೇ ತಾರೀಖು ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಪಟ್ಟಿಯನ್ನು ಪ್ರಿಂಟ್ ಮಾಡಲಾಗಿತ್ತು. ನಾನು ಎರಡು ವಿಚಾರದ ಬಗ್ಗೆ, ಅಂದರೆ ಮೊದಲನೆಯದಾಗಿ 2001ರಲ್ಲಿ ಹೊರಡಿಸಿದ್ದಂಥ ನೋಟಿಫಿಕೇಶನ್‌ನ್ನು ಕರ್ನಾಟಕ ಗಣಕೀಕೃತ ನೆಟ್‌ವರ್ಕ್ ಲಾಟರಿ ನಿಯಮಾವಳಿಗಳನ್ನು ಏನು ಹೊರಡಿಸಿದ್ದೀರಿ ಅದನ್ನು ಸಭೆಯ ಮುಂದೆ ಇಡಬೇಕು. ಮತ್ತು 1999ರ ಕರ್ನಾಟಕ ಲಾಟರಿ ನಿಯಮಗಳನ್ನು ರಚಿಸಿ ಇದನ್ನು 2000ದಲ್ಲಿ ಹೊರಡಿಸಿತಕ್ಕಂಥ ನಿಯಮಾವಳಿಗಳನ್ನು ನಿಯಮಾವಳಿಗಳ ಪ್ರಕಾರ ಇಡಬೇಕು. 2003 ರಲ್ಲಿ ಹೊರಡಿಸಿರತಕ್ಕಂಥ ನಿಯಮಾವಳಿಗಳನ್ನು ತಾವು ಇಟ್ಟಿದ್ದೀರಿ. ಈಗ ಅದಕ್ಕೆ ನಾನು ಒಂದು ನೋಟೀಸ್ ಕೊಟ್ಟಿದ್ದೇನೆ, ಮೋಶನ್ ಮೂವ್ ಮಾಡಿದ್ದೇನೆ. ಒಬ್ಬ ಸದಸ್ಯನಾಗಿ ಇದರ ಬಗ್ಗೆ ಚರ್ಚೆ ಮಾಡಬೇಕು ಎಂದು ನೋಟೀಸ್ ಕೊಟ್ಟಿದ್ದೇನೆ. ನಾನು ಕೊಟ್ಟ ತಕ್ಷಣ ಅವರೆಡನ್ನು ಬಿಟ್ಟು ಬೇರೆಯೊಂದನ್ನು ಸಭೆಯ ಮುಂದೆ ಇಡಲಾಗುವ ಕಾಗದ ಪತ್ರಗಳ ನೋಟೀಸನ್ನು ಮಾಡಿದ್ದಾರೆ. ಈ ಸಭೆಯಲ್ಲಿ ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿಸುತ್ತಿದ್ದೇನೆ. ಇವೆರಡೂ ನೋಟಿಫಿಕೇಶನ್‌ಗಳನ್ನು ತಾವು ಸಭೆಯಲ್ಲಿ ಇಡಬೇಕು, ಮಂಡಿಸಬೇಕು. ನಿಯಮಾವಳಿಗಳ ಪ್ರಕಾರ ಮಂಡಿಸಬೇಕು.

ಉಪಾಧ್ಯಕ್ಷರು : ವ್ಯವಸ್ಥೆ ಮಾಡುತ್ತೇವೆ. ಪೇಪರ್ ಲೀ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)